ಎಂ.ವಿ.ಸಿ - 892/2024
ಪಿ.ಡಬ್ಲ್ಯು. - 01

**ದಿನಾಂಕ 06-03-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು - 2 ನೇ ಎದುರುದಾರರ ಪರ ವಕೀಲರಿಂದಃ**

ನನಗೆ ವಾಹನ ಚಲಾಯಿಸಲು ನನ್ನ ಬಳಿ ಚಾಲನ ಪರವಾನಿಗೆ ಇದೆ ಅದನ್ನು ನಾನು ಹಾಜರುಪಡಿಸಿದ್ದೇನೆ. ಅಪಘಾತ ವಾಗುವ ಮುಂಚಿತವಾಗಿ ಒಂದು ಬಸ್ಸು ನನ್ನ ವಾಹವನ್ನು ಒವರ್ ಟೇಕ್ ಮಾಡಿ ಎದುರಿನಲ್ಲಿ ಬಂದು ನಿಂತಿತ್ತು . ಸದರಿ ಬಸು್ಸ ಸಂಖ್ಯೆ ನೆನಪಿಲ್ಲ . ಬಸ್ಸು ರಾಷ್ಟ್ರೀಯ ಹೆದ್ದಾರಿಯಲ್ಲಿ ನಿಂತಿತ್ತು ನನಗೆ ಒವರ್ ಟೇಕ್ ಮಾಡಲು ಸಾದ್ಯ ಇರಲಿಲ್ಲ. ಬಸ್ಸು ಒಮ್ಮೆಲೇ ನಿಂತಿದ್ದರಿಂದ ನಾನು ನನ್ನ ವಾಹನವನ್ನುತಕ್ಷಣ ನಿಲ್ಲಿಸಲು ಪ್ರಯತ್ನಿಸಿದೆ. ನನ್ನ ವಾಹನ ಎದುರು ನಿಂತಿದ್ದ ಬಸ್ಸಿಗೆ ಡಿಕ್ಕಿಪಡಿಸಿ ಜಖಂ ಗೊಂಡಿದೆ ಎಂದರೆ ಸರಿ . ಬಸ್ಸು ಒಮ್ಮೇಲೆ ನಿಂತಿದ್ದರಿಂದ ಡಿಕ್ಕಿ ಆಯಿತು ಎಂದು ನಾನು ಬಸ್ಸಿನವರ ವಿರುದ್ದ ದೂರು ಕೊಟ್ಟಿಲ್ಲ ಕಾರಣ ನನಗೆ ಬಸ್ಸು ಸಂಖ್ಯೆ ಗೊತ್ತಿರಲಿಲ್ಲ . ಅಪಘಾತದಿಂದ ನನಗೆ ಪೆಟ್ಟಾಗಲಿಲ್ಲ ನನ್ನ ವಾಹನಕ್ಕೆ ಮಾತ್ರ ಡ್ಯಾಮೇಜ್ ಆಗಿರುತ್ತದೆ . ನನ್ನ ಗಾಡಿಯಲ್ಲಿ ಪ್ರಯಾಣಿಕರು ಇದ್ದರು. ನಮ್ಮ ಹಿಂದಿನಿಂದ ಬರುತಿದ್ದ ಕೆಎ 47 ಎಂ 9226 ವಾಹನವನ್ನು ನಾನು ಗಮನಿಸಲಿಲ್ಲ . ಸದ್ರಿ ವಾಹನ ಡಿಕ್ಕಿಪಡಿಸಿತು ಎಂದು ನಾನು ಸುಳ್ಳು ದೂರು ಕೊಟ್ಟಿರುತ್ತೇನೆ ಎದಂರೆ ಸರಿಯಲ್ಲ . ಬಸ್ಸು ನಿರ್ಲಕ್ಷತನದಿಂದ ಒಮ್ಮೆಲೆ ನಿಲ್ಲಿಸಿದರಿಂದ ನಾನು ನನ್ನ ನಿರ್ಲಕ್ಷತನದಿಂದ ಬಸ್ಸಿಗೆ ಹೋಗಿ ಡಿಕ್ಕಿಪಡಿಸಿದೆ ಎಂದರೆ ಸರಿಯಲ್ಲ. ನನ್ನ ಕಾರಿನ ಹಿಂಭಾಗಕ್ಕೆ ಡ್ಯಾಮೇಜ್ ಆಗಿರುತ್ತದೆ . ನಾನು ಹೇಳುವಂತೆ ಕೆಎ 47 ಎಂ 9226 ವಾಹನ ನನ್ನ ವಾಹನಕ್ಕೆ ಟಚ್ ಮಾಡಿಲ್ಲ ಎಂದರೆ ಸರಿಯಲ್ಲ.

ನನಗೆ ರೂ 75,000 ಖರ್ಚು ಆಗಿರುತ್ತದೆ . ನನಗೆ ಇನ್ಸುರೆನ್ಸ್ ಇತ್ತು ಆದರೇ ನಷ್ಟವು ಬೇರೆ ವಾಹನದಿಂದ ಆಗಿದ್ದರಿಂದ ನಾನು ನಮ್ಮ ಇನ್ಸುರೆನ್ಸ್ ಕಂಪೆನಿಂದ ಕ್ಲೇಮ್ ಮಾಡಿಲ್ಲ. ಒಂದು ವೇಳೆ ಬಸ್ಸು ಒಮ್ಮೆಲೇ ನಿಲ್ಲಿಸದೇ ಇದ್ದರೆ ಆಗ ಅಪಘಾತ ಆಗುತ್ತಿರಲಿಲ್ಲ . ಬಸ್ಸು ಒಮ್ಮೆಲೇ ನಿಂತಿದ್ದರಿಂದ ಅಪಘಾತ ಆಗಿದೆ ಎಂದರೆ ಸರಿ . ಅಪಘಾತ ಆದ 15 ದಿನಗಳ ನಂತರ ನಾನು ಸರ್ವೇ ಮಾಡಿಸಿರುತ್ತೇನೆ . ನಮ್ಮ ಇನ್ಸುರೆನ್ಸ್ ಕಂಪೆನಿರವರೇ ಸರ್ವೇ ಮಾಡಿಸಿರುತ್ತಾರೆ . ನನ್ನ ವಾಹನಕ್ಕೆ ಡ್ಯಾಮೇಜ್

ಆಗದೇ ಇದ್ದರೂ ಕೂಡ ನಾನು ಡ್ಯಾಮೇಜ್ ಆಗಿದೆ ಎಂದು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. ಅಪಘಾತವು ಬಸ್ಸು ಮತ್ತು ನನ್ನ ನಿರ್ಲಕ್ಷತನದಿಂದ ಆಗಿದೆ ಎಂದರೆ ಸರಿಯಲ್ಲ. ಕೆಎ 47 ಎಂ 9226 ವಾಹನದ ಚಾಲಕ ಯಾವುದೇ ತಪ್ಪು ಇಲ್ಲ ಎಂದರೆ ಸರಿಯಲ್ಲ. ಸದ್ರಿ ವಾಹನದ ಚಾಲಕನ ತಪ್ಪಿನಿಂದ ಅಪಘಾತ ಆಗದೇ ಇರುವುದರಿಂದ 2 ನೇ ಎದುರುದಾರರು ಯಾವುದೇ ಪರಿಹಾರ ನೀಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ನಮ್ಮ ವಾಹನ 2018 ನೇ ಇಸವಿಯ ಮೊಡೆಲ್ ಆಗಿರುತ್ತದೆ . ಅಪಘಾತದ ಸಮಯದಲ್ಲಿ ವಾಹನದ ಬೆಲೆ ಮಾರುಕಟ್ಟೆ ಬೆಲೆ ರೂ 6,50,000 ಇತ್ತು. ಅಪಘಾತದ ಸಮಯದಲ್ಲಿ ನಮ್ಮ ವಾಹನ ಓಡಾಡುವ ಸ್ಥಿತಿಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ .

**ಮರು ವಿಚಾರಣೆ - ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ. ಉಡುಪಿ.